**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/128/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:11-09-2013

ಸಹಕಾರ ಸಂಘಗಳ ಉಪನಿಬಂಧಕರು,

_____________________ ಜಿಲ್ಲೆ,

_____________________

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ - ದಿನಾಂಕ:31-3-2014 ರ ಅಂತ್ಯಕ್ಕೆ ಅವಧಿ ಮುಗಿಯುವ ಹಾಗೂ ಚುನಾವಣೆ ನಡೆಸಬೇಕಾಗಿರುವ ಸಹಕಾರ ಸಂಘಗಳ/ ಸಹಕಾರಿಗಳ ಪಟ್ಟಿಯನ್ನು ಕಳುಹಿಸುವ ಕುರಿತು.

***

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರ ಪ್ರಕರಣ 39ಎ(1) ರ ಅವಕಾಶದಂತೆ ಆಕಸ್ಮಿಕ ಖಾಲಿ ಸ್ಥಾನವೂ ಸೇರಿದಂತೆ ಒಂದು ಸಹಕಾರ ಸಂಘದ ಮಂಡಲಿಯ ಸದಸ್ಯರ ಪ್ರತಿಯೊಂದು ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು, ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ. 2013 ರ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ನಡೆಯಬೇಕಾಗಿರುವ ಮಂಡಳಿಗಳ ಚುನಾವಣೆಗಳನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಅಧಿನಿಯಮ ಪ್ರಕರಣ 39ಎ(3) ರಲ್ಲಿ ಸೂಚಿಸಿರುವಂತೆ ಗೊತ್ತುಪಡಿಸಲಾದ ಅವಧಿಯಲ್ಲಿ ನಡೆಸುವ ಕುರಿತು ಆಯೋಗ ಈಗಾಗಲೇ ಕ್ರಮಕೈಗೊಂಡಿದೆ. ಪ್ರಾಥಮಿಕ ಸಂಘಗಳು, ಮಾಧ್ಯಮಿಕ ಹಾಗೂ ಫೆಡರಲ್ ಸಂಘಗಳಿಗೆ ಚುನಾವಣೆಗಳನ್ನು ನಡೆಸುವ ಕುರಿತು ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಮತ್ತು ಚುನಾವಣೆಯನ್ನು ನಿಗಧಿತ ಅವಧಿಯಲ್ಲಿ ನಡೆಸುವ ಕುರಿತಂತೆ ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಆಯೋಗವು ನೀಡಿರುವ ಚೆಕ್‌ಲಿಸ್ಟ್‌ನಂತೆ ಹಂತಹಂತವಾಗಿ, ಕಾನೂನಿನ ಅವಕಾಶಗಳಿಗೆ ಅನುಗುಣವಾಗಿ ಕ್ರಮವಿಡಲು ನಿರ್ದೇಶಿಸಲಾಗಿದೆ.

ದಿನಾಂಕ:31-3-2014 ಕ್ಕೆ ಅವಧಿ ಮುಗಿಯಲಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಕುರಿತಂತೆ ಅಧಿನಿಯಮವನ್ನು ಅನುಷ್ಠಾನಗೊಳಿಸಲು ತೊಂದರೆಗಳ ನಿವಾರಣೆ ವಿಷಯವಾಗಿ ಸರ್ಕಾರಕ್ಕೆ ಈಗಾಗಲೇ ದಿ:14-8-2013 ರಲ್ಲಿ ಪತ್ರ ಬರೆದು ಸೂಕ್ತ ಆದೇಶವನ್ನು ಹೊರಡಿಸುವ ಬಗ್ಗೆ ಮತ್ತು ಸಹಕಾರ ಸಂಘಗಳ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಯನ್ನು ತರುವ ಕುರಿತು ಅಗತ್ಯ ಕ್ರಮವಿಡುವಂತೆ ಕೋರಲಾಗಿದೆ. ಈ ಕುರಿತು ಸರ್ಕಾರದಿಂದ ಆದೇಶವನ್ನು ನಿರೀಕ್ಷಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012 ರ ಪ್ರಕರಣ 39ಎಎ (15) ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯೂ-

a. ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 6 ತಿಂಗಳಿಗೆ ಮುಂಚೆ ಸಹಕಾರಿ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದು.

b. ಸಹಕಾರ ಚುನಾವಣಾ ಆಯೋಗವು ನಿಯಮಿಸಬಹುದಾದಂಥ ಕ್ಯಾಲೆಂಡರ್ ಪ್ರಕಾರ ಆಯೋಗವು ಅಗತ್ಯಪಡಿಸಬಹುದಾದಂಥ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು. ಮತ್ತು

c. ಸಹಕಾರ ಚುನಾವಣಾ ಆಯೋಗವು ಸುಗಮವಾಗಿ ಸರಿಯಾದ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ಪಾರದರ್ಶಕವಾಗಿ ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು, ಎಂದು ನಿರ್ದೇಶಿಸುತ್ತದೆ.

----2

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, 2013ರ 13'ಡಿ' ರೀತ್ಯಾ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ ಆಡಳಿತ ಮಂಡಲಿಗಳಿಗೆ ಪದಾವಧಿ ಮುಕ್ತಾಯವಾಗುವ ದಿನಾಂಕದ ಕನಿಷ್ಟ 120 ದಿನಗಳ ಪೂರ್ವದಲ್ಲಿ ಸಹಕಾರ ಚುನಾವಣಾ ಆಯೋಗಕ್ಕೆ ಕೆಳಕಂಡ ವಿವರಗಳನ್ನೊಳಗೊಂಡ, ಸಾಮಾನ್ಯ ಚುನಾವಣೆಗಳನ್ನು ನಡೆಸಬೇಕಾಗಿರುವ ಎಲ್ಲಾ ಕಾರ್ಯನಿರತ ಅಸ್ತಿತ್ವದಲ್ಲಿರುವ ಸಹಕಾರ ಸಂಘಗಳ ಕ್ರೋಢೀಕೃತ ಪಟ್ಟಿಯೊಂದನ್ನು ಕಳುಹಿಸತಕ್ಕದ್ದಾಗಿದೆ.

1. ಸಹಕಾರ ಸಂಘದ ಹೆಸರು ಮತ್ತು ವಿಳಾಸ
2. ಆಡಳಿತ ಮಂಡಳಿಗೆ ಆಯ್ಕೆಯಾಗಬೇಕಾಗಿರುವ ನಿರ್ದೇಶಕರ ಸಂಖ್ಯೆ.
3. ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ
4. ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು

ಮೇಲ್ಕಂಡ ಮಾಹಿತಿಯನ್ನು ವರ್ಗವಾರು ಅಂದರೆ ಪ್ರಾಥಮಿಕ, ಮಾಧ್ಯಮಿಕ ಫೆಡರಲ್ ಸಂಘಗಳು ಹಾಗೂ ಅಪೆಕ್ಸ್ ಸಂಘವಾರು ಸಲ್ಲಿಸುವುದು.

2013ನೇ ಮಾರ್ಚ್ ಏಪ್ರಿಲ್ ಅಂತ್ಯಕ್ಕೆ ಚುನಾವಣೆ ನಡೆಸಲು ಬಾಕಿ ಇದ್ದ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳು ಈ ಹಿಂದೆ ಕಳುಹಿಸಲಾಗಿರುವ ಮಾಹಿತಿಯಲ್ಲಿ ಹಲವಾರು ನ್ಯೂನತೆಗಳಿರುವುದನ್ನು ಆಯೋಗ ಗಮನಿಸಿದೆ.

i. ಚುನಾವಣೆ ನಡೆಸಬೇಕಾದ ಅರ್ಹ ಕಾರ್ಯನಿರತ ಅಸ್ತಿತ್ವದಲ್ಲಿರುವ ಸಂಘಗಳ ಕ್ರೋಢೀಕೃತ ಸರಿಯಾದ ಪಟ್ಟಿಯನ್ನು ಒಂದೇ ಬಾರಿಗೆ ಕಳುಹಿಸದಿರುವುದು
ii. ಸಂಘದಿಂದ ಚುನಾವಣೆ ನಡೆಸುವ ಬಗ್ಗೆ ರಿಟರ್ನಿಂಗ್ ಆಫೀಸರ್ ನೇಮಕಾತಿ ಕೋರಿ ನೇರವಾಗಿ ಆಯೋಗಕ್ಕೆ ಸಂಘಗಳಿಂದ ಪತ್ರಗಳು ಬಂದಿರುವುದು ಆದರೆ ಜಿಲ್ಲಾ ಚುನಾವಣಾಧಿಕಾರಿಗಳು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರುಗಳು ಇಲ್ಲದಿರುವುದು.
iii. ಇನ್ನೂ ಪದಾವಧಿ ಇರುವ ಸಂಘಗಳ ಹೆಸರನ್ನು ಪಟ್ಟಿಯಲ್ಲಿ ಸೇರಿಸಿರುವುದು
iv. ವಿಳಂಬವಾಗಿ ಪಟ್ಟಿಯನ್ನು ಕಳುಹಿಸಿರುವುದು ಇದರಿಂದಾಗಿ ನಿಗದಿತ ಅವಧಿಯಲ್ಲಿ ಕರಡು ಮತದಾರರ /ಸುಸ್ತಿದಾರರ ಪಟ್ಟಿ ಪ್ರಕಟಿಸಲು ತೊಂದರೆ ಆಗಿರುತ್ತದೆ.
v. ಸಂಘವು ಕಾರ್ಯನಿರ್ವಹಿಸುತ್ತಿದೆಯೆ/ಸ್ಥಗಿತಗೊಂಡಿದಿಯೆ ಎಂಬುದನ್ನು ಸಮರ್ಪಕವಾಗಿ ಪರಿಶೀಲಿಸದೆ, ಸರಿಯಾದ ವಿಳಾಸ ನೀಡದೆ ಪಟ್ಟಿ ಕಳುಹಿಸುವಿಕೆ. ಸ್ಥಗಿತಗೊಂಡಿದ್ದು ಪುನಶ್ಚೇತನ ಸಾಧ್ಯತೆ ಇಲ್ಲದಿದ್ದಲ್ಲಿ ಆರ್ಥಿಕ ಸ್ಥಿತಿ ತೀರ ಹದಗೆಟ್ಟಿದ್ದಲ್ಲಿ ಅಂತಹ ಸಂಘಗಳ ಮಂಡಲಿಗೆ ಚುನಾವಣೆ ನಡೆಸಲು ಸಾಧ್ಯವಾಗುವುದಿಲ್ಲ ಅಂತಹ ಸಂಘಗಳನ್ನು ಸಮಾಪನೆಗೊಳಿಸುವುದು ಸೂಕ್ತವಾಗಿರುತ್ತದೆ. ಆ ಪ್ರಕಾರ ಸಕ್ಷಮ ಪ್ರಾಧಿಕಾರಿಗಳು ಕ್ರಮವಹಿಸತಕ್ಕದ್ದು.
vi. ವಿಶೇಷಾಧಿಕಾರಿ / ಆಡಳಿತಾಧಿಕಾರಿ ನೇಮಕವಾಗಿರುವ ಪ್ರಕರಣಗಳಲ್ಲಿ, ಸದರಿ ಅಧಿಕಾರಿಗಳ ನೇಮಕಾತಿ ಅವಧಿ ಮುಗಿದಿದೆಯೆ ಅಥವಾ ವಿಸ್ತರಣೆಯಾಗಿದೆಯೆ? ಎಂಬ ಬಗ್ಗೆ ಪರಿಶೀಲಿಸುವುದು ಸದರಿ ಅಧಿಕಾರಿಗಳ ನೇಮಕಾತಿ ಆದೇಶದಲ್ಲಿ ಗೊತ್ತುಪಡಿಸಿದ ಅವಧಿ ಮುಗಿಯುವ ಮುನ್ನ ಆಡಳಿತ ಮಂಡಲಿ ಚುನಾವಣೆ ನಡೆಸುವಂತೆ ವ್ಯಾಪ್ತಿಯ ಸಕ್ಷಮ ನಿಬಂಧಕರು ಆದೇಶ ನೀಡಿರುವುದನ್ನು ಸರಿಯಾಗಿ ಗಮನಿಸತಕ್ಕದ್ದು.
vii. ಸಂಘದ ಹೆಸರು /ನೋಂದಣಿ ಸಂಖ್ಯೆಯಲ್ಲಿ ತಪ್ಪಾಗಿ ಮಾಹಿತಿ ನೀಡಿರುವಿಕೆ– ನೋಂದಣಿ ಪ್ರಮಾಣ ಪತ್ರ / ನೋಂದಣಿ ಆದ ಬೈಲಾ ರೀತ್ಯಾ ಸಂಘದ ಸ್ಪಷ್ಟ ಹೆಸರು, ನೋಂದಣಿ ಸಂಖ್ಯೆಯನ್ನು ಸಮರ್ಪರ್ಕವಾಗಿ ಪರಿಶೀಲಿಸುವಿಕೆ, ಅದರಂತೆ ಚುನಾವಣೆ ನಡೆಸಬೇಕಾದ ಸಂಘಗಳ ಸರಿಯಾದ ಪಟ್ಟಿಯನ್ನು ಸಿದ್ದಪಡಿಸುವುದು.

ಈ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಯು ಚುನಾವಣೆಗೆ ಬಾಕಿ ಇರುವ ಸಂಘಗಳ ಪಟ್ಟಿಯನ್ನು ಕಳುಹಿಸುವಾಗ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಕ್ರಮ ಕೈಗೊಂಡು ದಿನಾಂಕ:31.03.2014ಕ್ಕೆ ಆಡಳಿತ ಮಂಡಳಿಗಳ ಪದಾವಧಿ ಮುಗಿದು, ಚುನಾವಣೆ ನಡೆಸಬೇಕಾದ ಸಂಘಗಳ ಸರಿಯಾದ ಪಟ್ಟಿಯನ್ನು ಸಮರ್ಪಕವಾಗಿ ಕಳುಹಿಸುವಂತೆ ಸೂಚಿಸಿದೆ. ಈ ರೀತಿ ಅವಧಿ ಮುಗಿಯಲಿರುವ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ 120 ದಿವಸಗಳಿಗೆ ಮುಂಚೆ ಜಿಲ್ಲೆಯ ಸಹಕಾರ ಸಂಘಗಳಿಗೆ, ಚುನಾವಣೆ ನಡೆಸುವ ಸಂಬಂಧ ಕ್ರೋಢೀಕೃತ ಪಟ್ಟಿಯನ್ನು ಸಲ್ಲಿಸಿದ ನಂತರ ಆಯೋಗವು ನಿಯಮ 13'ಡಿ' (2) ರಂತೆ ಕ್ರಮವಿಡಬೇಕಾಗುತ್ತದೆ ನಿಯಮ 13'ಡಿ" (3) ರ ಮೇರೆಗೆ.–

----3

a. ಕರಡು ಮತದಾರರ ಪಟ್ಟಿ, ಸುಸ್ತಿದಾರರ ಪಟ್ಟಿ, ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ತಾರೀಖಿಗೆ ಮುನ್ನ ಮರುಪಾವತಿಗೆ ಅವಕಾಶವಿರುವ ಸದಸ್ಯರ ಪಟ್ಟಿಗಳನ್ನು ಸಾಮಾನ್ಯ ಚುನಾವಣಾ ದಿನಾಂಕಕ್ಕೆ 45 ದಿವಸಗಳು ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು. ಸುಸ್ತಿದಾರ ಸದಸ್ಯರು ತಮ್ಮ ಬಾಕಿಯನ್ನು ಸಾಮಾನ್ಯ ಚುನಾವಣಾ ದಿನಾಂಕಕ್ಕೆ 15 ದಿವಸಗಳು ಮುಂಚಿತವಾಗಿ ಪಾವತಿಸುವಂತೆ ತಿಳುವಳಿಕೆ ನೀಡುವುದು.

b. ಚುನಾವಣೆಗೆ 15 ಸ್ಪಷ್ಟ ದಿವಸಗಳ ಮುಂಚೆ ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು

ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ಸಿದ್ದಪಡಿಸಿ ಸಲ್ಲಿಸಿದ ಕರಡು ಮತದಾರರ ಪಟ್ಟಿಯನ್ನು ಸಂಘದ ಸಂಬಂಧಿಸಿದ ದಾಖಲೆಗಳನ್ವಯ ಜಿಲ್ಲಾ ಚುನಾವಣಾಧಿಕಾರಿಗಳು ಪರಿಶೀಲನಾ ತಂಡಗಳನ್ನು ರಚಿಸಿ ಅರ್ಹ ಮತದಾರರ ಸರಿಯಾದ ಅಂತಿಮ ಪಟ್ಟಿಯನ್ನು ನಿಗಧಿತ ಅವಧಿಯೊಳಗೆ ಪರಿಶೀಲಿಸಿ ದೃಢೀಕರಿಸತಕ್ಕದ್ದು ಮತ್ತು ಅಧಿಕೃತಗೊಳಿಸತಕ್ಕದ್ದು.

ಅಂತಿಮ ಮತದಾರರ ಪಟ್ಟಿಯು ಕೆಳಗಿನ ಅಂಶಗಳನ್ನು ಒಳಗೊಂಡಿರತಕ್ಕದ್ದು.

a. ಪ್ರಾಥಮಿಕ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಅಥವಾ
b. ಮಾಧ್ಯಮಿಕ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳು
c. ಒಂದು ಒಕ್ಕೂಟ ಮತ್ತು ಅಪೆಕ್ಸ್ ಸಹಕಾರ ಸಂಘದ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಸದಸ್ಯ ಸಹಕಾರ ಸಂಘಗಳ ಎಲ್ಲಾ ಪ್ರತಿನಿಧಿ ಸದಸ್ಯರು ಅಥವಾ ಮತದಾರರ ಪಟ್ಟಿಯ ಪ್ರತಿಯನ್ನು ಪ್ರತಿ ಸಂಘದ ಕಛೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಕಛೇರಿಯಲ್ಲಿ ಪರಿವೀಕ್ಷಣೆಗೆ ಮುಕ್ತವಾಗಿಟ್ಟಿರತಕ್ಕದ್ದಾಗಿದೆ.

ಮೇಲೆ ವಿವರಿಸಿದಂತೆ ಅಧಿನಿಯಮ / ನಿಯಮಗಳಿಗೆ ಅನುಸಾರವಾಗಿ ಹಂತಹಂತವಾಗಿ ಸಹಕಾರ ಚುನಾವಣಾ ಆಯೋಗ/ ಜಿಲ್ಲಾ ಚುನಾವಣಾಧಿಕಾರಿಯು ಕ್ರಮ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಯಾವುದೇ ನ್ಯೂನತೆಗಳಿಗೆ ಅವಕಾಶ ನೀಡದೇ 31.03.2014ಕ್ಕೆ ನಿಮ್ಮ ಜಿಲ್ಲೆಯಲ್ಲಿ ಪದಾವಧಿ ಮುಗಿದ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳ /ಸಹಕಾರಿಗಳ ಕ್ರೋಢೀಕೃತ ಸರಿಯಾದ ಪಟ್ಟಿಯನ್ನು ಒಂದೇ ಬಾರಿಗೆ ಸಮರ್ಪಕವಾಗಿ ಕಳುಹಿಸುವ ಬಗ್ಗೆ ಆದ್ಯ ಗಮನಹರಿಸಿ ಆಯೋಗಕ್ಕೆ ದಿನಾಂಕ:30.09.2013ರ ಒಳಗಾಗಿ ಕಳುಹಿಸುವ ಬಗ್ಗೆ ಅಗತ್ಯ ಕ್ರಮವಿಡಲು ಸೂಚಿಸಿದೆ.

ತಮ್ಮ ನಂಬುಗೆಯ

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

ಪ್ರತಿಗಳು:–

1. ಸಹಕಾರ ಸಂಘಗಳ ಜಂಟಿ ನಿಬಂಧಕರು ________________ ಪ್ರಾಂತ ____________
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು________________ಉಪವಿಭಾಗ____________
3. ಸಹಕಾರ ಸಂಘಗಳ ನಿಬಂಧಕರು, ನಂ–1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರು
5. ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ) ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52
6. ನಿರ್ದೇಶಕರು ಮತ್ತು ಕಬ್ಬು ಅಭಿವೃದ್ಧಿ ಆಯುಕ್ತರು ಸಕ್ಕರೆ ನಿರ್ದೇಶನಾಲಯ, ಬೆಂಗಳೂರು.
7. ಎಲ್ಲಾ ರಾಜ್ಯ ಅಭಿವೃದ್ಧಿ ಅಧಿಕಾರಿಗಳು (ಸಹಕಾರ), ಕಾಡಾ
8. ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಿಗೆ,
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಅಂತಸ್ತು, ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
10. ವಿಶೇಷ ಕರ್ತವ್ಯಾಧಿಕಾರಿ, ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು
11. ರಕ್ಷಾ ಕಡತ.